## 6

# ನಾವು ನಂಬಿದಂತೆ ವರ್ತಿಸುವದು (1:19-27)

ಚುಚ್ಚುವಂತ ಪದಗಳಿಂದ ಸೊಲೋಮೋನನು ಪ್ರಸಂಗಿ 6ನೇ ಅಧ್ಯಾಯವನ್ನು ಪ್ರಾರಂಭಿಸುತ್ತಾನೆ: "ಲೋಕದಲ್ಲಿ ಮನುಷ್ಯರಿಗೆ ವಿಪರೀತವಾಗಿ ಉಂಟಾಗಿರುವ ದುರವಸ್ಥೆಯನ್ನು ಕಂಡೆನು" (ಪ್ರಸಂಗಿ 6:1). ಈ ಪದಗಳಿಂದ ನಮ್ಮ ಅಧ್ಯಯನವನ್ನು ಪರಿಚಯಿಸುವುದು ಯೋಗ್ಯವಾಗಿದೆ, ಪಾಪದ ಇರುವಿಕೆಯು ಈಗಲೂ ಇರುವಂತೆ ಯಾಕೋಬನ ದಿವಸಗಳ ಕ್ರಿಸ್ತನ ಸಭೆಯಲ್ಲೂ ಇರುವಂಥದ್ದಾಗಿತ್ತು. ಈ ದುರವಸ್ಥೆಯು, ಸಮಾಜದಲ್ಲಿನ ನಮ್ಮ ಪರಿಣಾಮವನ್ನು ಕುಂಟಿತಗೊಳಿಸಿದ. ನಮ್ಮಪರಿಚಯದವರ ನಡುವೆ ನಮ್ಮನ್ನು ಕೆಲಸಕ್ಕೆ ಬಾರದವರನ್ನಾಗಿ ಮಾಡಿ, ಪ್ರಭಾವ ಶೂನ್ಯತೆಗೆ ನಡಿಸುತ್ತದೆ. ಅದು ವಿವಾಹ ವಿಚ್ಛೇದನವಾಗಿರಬಹುದು, ಅದು ಗಂಡ ಹೆಂಡತಿಯರ ನಡುವೆಯ ವಿಚ್ಛೇದನವಲ್ಲ, ಆದರೆ ಅದು ನಮ್ಮ ಆಲೋಚನೆಗೂ ಮತ್ತು ಕ್ರಿಯೆಗು ನಡುವೆಯ ಮತ್ತು ವರ್ತನೆಗೂ ನಡುವಿನ ವಿಚ್ಛೇದನದ ಸಮಸ್ಯೆ. ಯಾಕೋಬನು ಈಗಾಗಲೇ ಸಂಕಷ್ಟ ಹಾಗೂ ಶೋಧನೆಯ ಸಮಸ್ಯೆಯ ಬಗ್ಗೆ ಬೋಧಿಸಿದ್ದಾನೆ, ಆದರೆ ಈಗ ತನ್ನ ಪತ್ರಿಕೆಯ ಮೂಲ ಮುಖ್ಯಾಂಶವನ್ನು ತಿಳಿಸುತ್ತಿದ್ದಾನೆ: *ನಂಬಿಕೆಯು ಜೀವಿತದಲ್ಲಿಯೂ ಮತ್ತು ಕ್ರಿಯೆಯಲ್ಲಿಯೂ ಇರುವ ವ್ಯತ್ಯಾಸವನ್ನು ಬದಲಾಯಿಸುತ್ತದೆ.*

ಕೆಲವರು ಹೇಳುವಂತೆ, ಕೆಲವರು ನಂಬುವುದು ಒಂದನ್ನು ಮಾಡುವುದು ಇನ್ನೊಂದನ್ನು ಇದು ಸಂಪೂರ್ಣವಾಗಿ ವ್ಯತಿರಿಕ್ತವಾದ ಸಂಗತಿಯಾಗಿರುತ್ತದೆ, ಅವರನ್ನು ನಾವು ಕಪಟಿಗಳು ಎಂದು ಕರೆಯುತ್ತೇವೆ. ನಮ್ಮ ಆಂಗ್ಲ ಪದ "ಹಿಪ್ಪೋಕ್ರಸಿ" ಈ ಪದವನ್ನು ಗ್ರೀಕ್ ಭಾಷೆಯಲ್ಲಿ ಗಮನಿಸುವಾಗ, ಅದು ಒಂದು ನಟನೆಯ ಪಾತ್ರ ಅಥವಾ ರಂಗಮಂದಿರದ ನಟನೆ. ಇದನ್ನು ಯಾರು ವಿವರಿಸಲಾರರು, ಆದರೆ "ಹಿಪ್ಪೋಕ್ರಸಿ" ಇದನ್ನು ಧಾರ್ಮಿಕ ಸಂಬಂಧಪಟ್ಟಂಥ ವಿಷಯಗಳಲ್ಲಿ ಕಾಣುತ್ತೇವೆ. ಒಬ್ಬನು ಭಾನುವಾರ ಸಭೆಗೆ ಹೋಗಿ ಸಭಾ ಕಾರ್ಯಗಳಲ್ಲಿ ಪಾಲನ್ನು ತೆಗೆದುಕೊಳ್ಳುತ್ತಾನೆ, ಆದರೆ ವಾರದ ಆರು ದಿನವೂ ಪಾಪದಲ್ಲಿ ಜೀವಿಸುತ್ತಾನೆ. ಈ ವಿಷಯ ಎಲ್ಲರಿಗೂ ತಿಳಿದಿರುವಂಥದ್ದೆ. ಯೇಸು ಜನರಿಗೆ ತಿಳಿಸಿದ್ದು (ಲೂಕ 6:46) ವಿಧೇಯತೆ ಇಲ್ಲದ ತುಟಿಯ ಹೇಳಿಕೆಗಳು ಕಪಟತನವೇ.

ಮನುಷ್ಯನ ಆಲೋಚನೆಗೆ ತಕ್ಕಂತೆ ಅವನ ಕ್ರಿಯೆಗಳು ಸ್ಪಂದಿಸಿದರೆ, ಅದು ನಿಜವಾದ ನಂಬಿಕೆ ಎಂದು ಯಾಕೋಬನು ಸ್ಪಷ್ಟಪಡಿಸುತ್ತಿದ್ದಾನೆ. ಅವನ ಯೋಚನೆಗಳಲ್ಲಿ, ಅವನ ಸ್ಥಾನದಲ್ಲಿ, ಅವನ ಭಾಷೆಗಳಲ್ಲಿ ಅವನ ಹವ್ಯಾಸಗಳಲ್ಲಿ, ಆಯ್ಕೆ ಮಾಡಿಕೊಳ್ಳುವ ಸ್ನೇಹಿತರಲ್ಲಿ, ನಂಬಿಕೆಯ ಕ್ರಿಯೆಗಳ ವ್ಯತ್ಯಾಸಗಳು ಕಾಣಬೇಕು. ನಾವು ಎಷ್ಟು ಆತ್ಮೀಕರಾಗಿದ್ದೇವೆ ಎಂಬುದು ಪ್ರಮುಖವಲ್ಲ; ನಮ್ಮ ಜೀವಿತವನ್ನು ಕ್ರಿಸ್ತನ ಅಧಿಕಾರಕ್ಕೆ ಒಳಪಡಿಸುವುದೇ ಬಹು ಪ್ರಾಮುಖ್ಯವಾಗಿದೆ.

1:19-27ರಲ್ಲಿ, ಯಾಕೋಬನ ಮೂಲಕ ಪರಿಶುದ್ಧಾತ್ಮನು ನಮ್ಮ ಜೀವಿತದ ಮೂರು ಕ್ಷೇತ್ರಗಳಲ್ಲಿರಬೇಕಾದ ನಂಬಿಕೆಯ ವ್ಯತ್ಯಾಸಗಳನ್ನು ತಿಳಿಸುತ್ತಾನೆ.

### ಕೋಪ ಮತ್ತು ನಾಲಿಗೆ (1:19, 20)

ಒಬ್ಬ ವ್ಯಕ್ತಿಯು ತನ್ನ ಕೋಪವನ್ನು ಮತ್ತು ನಾಲಿಗೆಯನ್ನು ಹತೋಟಿಯಲ್ಲಿಡುವಂಥದ್ದು ಅವನ ಜೀವಿತ ಮತ್ತು ನಂಬಿಕೆಯನ್ನು ಅನುರೂಪದಲ್ಲಿಟ್ಟು ಕೊಳ್ಳುವ ಪರೀಕ್ಷೆಯಾಗಿದೆ.

ನೀನು ಕೋಪವನ್ನು ಹತೋಟಿಗೆ ತರಬಹುದೇ? ಬೆಂಕಿಯಂತ ಕೋಪವನ್ನು ಮತ್ತು ಉದ್ದವಾದ ನಾಲಿಗೆಯನ್ನು ಹೊಂದಿರುವವನು ತನ್ನ ಕ್ರೈಸ್ತತ್ವದ ವರ್ಚಸನ್ನು ಕಳೆದುಕೊಳ್ಳುತ್ತಾನೆ. ಆದುದರಿಂದ ಯಾಕೋಬನು, "ನನ್ನ ಪ್ರೀಯ ಸಹೋದರರೇ. ನೀವು ಬಲ್ಲವರು ಆದರೆ ಪ್ರತಿಯೊಬ್ಬನು ಕಿವಿಗೊಡುವದರಲ್ಲಿ ತೀವ್ರವಾಗಿಯೂ ಮಾತಾಡುವದರಲ್ಲಿ ನಿಧಾನವಾಗಿಯೂ ಇರಲಿ. ಕೋಪಿಸುವದರಲ್ಲಿ ನಿಧಾನವಾಗಿಲಿ; ಮನುಷ್ಯರ ಕೋಪವು ದೇವರಿಗೆ ಮೆಚ್ಚಿಗೆಯಾಗಿರುವ ನೀತಿಗೆ ಅನುಕೂಲವಾಗುವದಿಲ್ಲ" (ಯಾಕೋಬ 1:19, 20).

ಯಾಕೋಬನು ಈ ಎಲ್ಲಾ ನಡವಳಿಕೆಗಳನ್ನು ಒಂದು ನಿಕರವಾದ ಪರಿಸ್ಥಿತಿಗೆ ತಂದಿದ್ದಾನೆ. ಒಬ್ಬನು ಎಷ್ಟೋ ಸಾರಿ ಕೋಪಗೊಂಡವನಾಗಿ ಕೇಳಿಸಿಕೊಳ್ಳುವ ಸಂದರ್ಭದಲ್ಲಿ, ಮಾತಾಡುವವನಾಗಿದ್ದಾನೆ? ಇದು ಧಾರ್ಮಿಕ ಚೌಕಟ್ಟಿನಲ್ಲಿ ನಡೆಯುವುದಾದರೆ, ಅದು ವಿಶೇಷವಾದ ಸೋಲಾಗಿರುತ್ತದೆ. ಶತಮಾನಗಳಿಂದಲೂ ಕ್ರೈಸ್ತರು ನಿಂದೆಗೂ ಮತ್ತು ನಾಚಿಕೆಗೂ ಒಳಗಾಗುವಾಗ ಅದರಲ್ಲಿರುವ ಕ್ರಿಸ್ತನ ತರಹದ ಪ್ರತಿಕ್ರಿಯೆ ಏನು. ನಮ್ಮ ಪುನಃಸ್ಥಾಪನೆಯ ಕ್ರಾಂತಿಯ ಕುರಿತಾದ ಟೀಕೆಯ ಬಗ್ಗೆ ಯೋಚಿಸಿರಿ. ಟೀಕೆಗೆ ಒಳಗಾಗುವಾಗ ನಮ್ಮ ಪ್ರತಿಕ್ರಿಯೆ ಏನು? ಅದು ನಮ್ಮಲ್ಲಿ ಕೋಪವನ್ನೆಬ್ಬಿಸುತ್ತದೆ? ಅವರನ್ನು "ಗಟ್ಟಿಯಾದ ಧ್ವನಿಯಲ್ಲಿ ಪ್ರತಿನಿಂದಿಸಬೇಕೋ"? "ಅದು ಸ್ವಭಾವ ಸಿದ್ಧವಾದ ಸರಳ ವಿಷಯ," ಆದರೆ ಅದು ಸರಿಯಾದ ಸಂಗತಿಯಲ್ಲ. ನಂಬಿಕೆಯು "ನಮ್ಮಲ್ಲಿ ವ್ಯತ್ಯಾಸವನ್ನು ಉಂಟುಮಾಡಿದ್ದರೆ," ನಾವುಗಳು "ಕೇಳುವದರಲ್ಲಿ ತೀವ್ರವಾಗಿಯೂ, ಮಾತಾಡುವದರಲ್ಲಿ ನಿಧಾನವಾಗಿಯೂ, ಕೋಪಿಸುವದರಲ್ಲಿ ನಿಧಾನರಾಗಿಯೂ ಇರುತ್ತೇವೆ" (1:19).

## ತಲೆ ಮತ್ತು ಹೃದಯ (1:21)

ಸುವಾರ್ತೆಯು ಸಾರಲ್ಪಡುವಾಗ, ಅನೇಕ ಪ್ರತಿಕ್ರಿಯೆಗಳು ಉಂಟಾಗುತ್ತವೆ. ಅಥೇನೆ ಪಟ್ಟಣದ ತತ್ವಜ್ಞಾನಿಗಳು "ವಿರೋಧಿಸಿದರು" (ಅಪೊಸ್ತಲರಕೃತ್ಯಗಳು 17), ಆದರೆ ಪಂಚಾಶತ್ತಮ ಹಬ್ಬದ ದಿವಸ ಮೂರು ಸಾವಿರ ಜನರು ನಂಬಿ ವಿಧೇಯರಾದರು (ಅಪೊಸ್ತಲರಕೃತ್ಯಗಳು 2). "ಶುಭ ಸಂದೇಶವು" ಸಾರಲ್ಪಡುವಾಗ ಯಾಕೆ ಈ ಪ್ರತಿಕ್ರಿಯೆಗಳು? ಆ ವ್ಯತ್ಯಾಸಗಳು ಸುವಾರ್ತೆಯಲ್ಲಿ ಅಡಗಿರುವದಿಲ್ಲ; ಮಣ್ಣಿನ ಕುರಿತಾಗಿ ಯೇಸುವು ಹೇಳಿದ ಸಾಮ್ಯದಂತೆ (ಲೂಕ 8:4-15) ಅದು ದೇವರ ವಾಕ್ಯವನ್ನು ಕೇಳುವವರ ಹೃದಯದಲ್ಲಿ ಅಡಗಿರುತ್ತದೆ.

ಯಾಕೋಬನ, "ಪ್ರಾಯೋಗಿಕವಾದ ಕ್ರೈಸ್ತತ್ವದ" ಈ ಪತ್ರಿಕೆಯಲ್ಲಿ ಪ್ರತಿದಿನದ ಜೀವಿತದಲ್ಲಿ ದೇವರ ವಾಕ್ಯವು ಉಂಟುಮಾಡಬಹುದಾದ ವ್ಯತ್ಯಾಸಗಳ ಕುರಿತು ಒತ್ತಿ ಹೇಳಲಾಗಿದೆ. 1:21ರ ವಿಷಯವು ದೇವರ ವಾಕ್ಯದ ಪ್ರತಿಕ್ರಿಯೆಯಾಗಿದೆ. ಆ ವಾಕ್ಯವು "ಕಾಪಾಡುವದಕ್ಕೆ" ಸಾಮರ್ಥ್ಯವನ್ನು ಹೊಂದಿರುತ್ತದೆ. ಅದನ್ನು ಕ್ರೈಸ್ತನು ತನ್ನ ಹೃದಯದಲ್ಲಿ ಅಳವಡಿಸಿಕೊಂಡರೆ ಮಾತ್ರ (ಆಳವಾಗಿ ಬೇರೂರಬೇಕು).

ದೇವರ ವಾಕ್ಯವನ್ನು ಸ್ವೀಕರಿಸುವ ಹೃದಯವನ್ನು ಹೇಗೆ ಸಿದ್ಧಪಡಿಸಿಕೊಳ್ಳುತ್ತೇವೆ? ವಾಕ್ಯವನ್ನು ಸ್ವೀಕರಿಸುವಂಥ ಹೃದಯವು, ಅದನ್ನು ಸರಿಯಾಗಿಯೂ, ಪರಿಣಾಮಕಾರಿಯಾಗಿಯೂ ಸ್ವೀಕರಿಸಬೇಕಿದ್ದರೆ, ಅದು ಎರಡು ಪ್ರಾಮುಖ್ಯವಾದ ಸಂಗತಿಗಳನ್ನು ಹೊಂದಿಕೊಳ್ಳಬೇಕು. ಮೊದಲನೆಯದಾಗಿ, ಹೃದಯಲ್ಲಿರುವ ಸ್ವನೀತಿಯ ಕೆಟ್ಟತನವನ್ನು ಮತ್ತು ಇರುವ ಸಕಲ ದುಷ್ಟತನವನ್ನು ತೆಗೆದು ಹಾಕಬೇಕು. "ಕೆಲವರು ದೇವರ ವಾಕ್ಯವು ತಮ್ಮ ಹೃದಯದಲ್ಲಿ ಬೇರೂರುವದನ್ನು ನಿರಾಕರಿಸುತ್ತಾರೆ." ಯಾಕೆಂದರೆ ಅವರಲ್ಲಿ ವಾಕ್ಯಕ್ಕೆ ಸ್ಥಳವಿರುವದಿಲ್ಲ. ಅವರ ಹಳೆಯ ಜೀವಿತದ ಮಾನಸಾಂತರವು ಪೂರ್ಣವಾಗಿರುವದಿಲ್ಲ. ತನ್ನ ಹಳೆಯ ಸ್ವಭಾವದ ಸಕಲ ಕೆಟ್ಟತನಗಳನ್ನು ತೆಗೆದು ಹಾಕದ ಹೊರತು, ಸುವಾರ್ತೆಯು ಅವರಲ್ಲಿ ತನ್ನ ಸದ್ಗುಣಗಳನ್ನು ಬೆಳಸುವದಿಲ್ಲ. ಎರಡನೆಯದಾಗಿ, "ದೀನ

ಬಾವದಿಂದ" ಸುವಾರ್ತೆಯ ನೀತಿ ಶಿಕ್ಷೆಯನ್ನು ಮತ್ತು ಸಲಹೆಯನ್ನು ಸ್ವೀಕರಿಸಬೇಕು. ಕೆಲವರು ಬೈಬಲನ್ನು ನೀಡುವ ಪಾಪದ ಕುರಿತಾದ ಶಿಕ್ಷೆಯ ಕುರಿತು ಕೋಪಗೊಳ್ಳು ತ್ತಾರೆ. ಮತ್ತು ಅವರ ಪಾಪದ ವಿಷಯವನ್ನು ತಿಳಿಸಿದ ಪ್ರಸಂಗಿಗಳನ್ನು ದ್ವೇಷಿಸುತ್ತಾರೆ. ಮಾರ್ಗದರ್ಶನವನ್ನು ಮಾಡುವ ದೇವರ ವಾಕ್ಯವನ್ನು ಕ್ರೈಸ್ತನು ತನ್ನಲ್ಲಿ ಅಳವಡಿಸಿಕೊಂಡು ತನ್ನನ್ನು ಬದಲಿಸಿಕೊಳ್ಳದಿದ್ದರೆ, ಅವನು ಏನಾಗಿರಬೇಕೋ, ಆ ರೀತಿ ಇರುವುದು ಅಸಾಧ್ಯವಾ ಗುತ್ತದೆ. ಒಳ್ಳೆಯ ಮತ್ತು ಫಲದಾಯಕವಾದ ಹೃದಯವು ನಿರ್ಮಲ ಮತ್ತು ದೀನತೆಯ ಹೃದಯವಾಗಿರುತ್ತದೆ. ಈ ನಿಯಮಗಳಿಗೆ ಒಳಗಾಗಿರುವ ಹೃದಯವು, ಆತ್ಮೀಕ ಹಾಗೂ ದೈಹೀಕ ಬಲದಿಂದ ಅಭಿವೃದ್ಧಿಯಾಗುತ್ತದೆ.

## ನಡೆ ಹಾಗೂ ಕೆಲಸ (1:22-27)

ಲಾಭ ದಾಯಕವಾದ ಜೀವಿತಕ್ಕೆ ಸುವಾರ್ತೆಯನ್ನು ಪರಿವರ್ತಿಸಿಕೊಳ್ಳಬೇಕು. ಇದರ ಪರಿಣಾಮದಿಂದ ಉಂಟಾಗುವ ಕ್ರಿಯೆಯು ಜೀವಿತಕ್ಕೆ ಬುನಾದಿಯಾಗಿರುತ್ತದೆ. ಒಬ್ಬನ ವರ್ತನೆಯಲ್ಲಿ ಬದಲಾವಣೆ ಇಲ್ಲದ ಹೊರತು, ಆರಾಧನೆಗೆ, ಹೋಗುವದಾಗಲೀ, ಮತ್ತು ಪ್ರಸಂಗವನ್ನು ಕೇಳುವದಾಗಲೀ, ಯಾವುದೇ ವಿಧವಾದ ಸತ್ಯದ ಮೌಲ್ಯಗಳನ್ನು ವ್ಯತ್ಯಾಸವಾಗಿ ಕಾಣಿಸುವದಿಲ್ಲ. ನಾನು ಸೇವೆ ಮಾಡಿದ ಸಭೆಯಲ್ಲಿ ಪ್ರಸಂಗವನ್ನು ಇಷ್ಟಪಡುತ್ತಿದ ಒಬ್ಬ ವ್ಯಕ್ತಿಯನ್ನು ಸಂಧಿಸಿದ್ದೆ ಅವನು, ಅತಿ ಶಬ್ದದಿಂದ ಬೋಧಿಸಲಾಗುವ ಪ್ರಸಂಗವನ್ನು ನೇರವಾದ, ಕುಣಿಸುವಂಥ, ಮತ್ತು "ಅಗ್ನಿ - ಗಂಧಕಗಳ ನರಕದ" ಸಂದೇಶಗಳನ್ನು ಇಷ್ಟಪಡುತ್ತಿದ್ದನು. ಅವನು ಆಲಯದ ದ್ವಾರಗಳ ಬಳಿಗೆ ಬಂದು ಅವನು ಪ್ರಸಂಗಗಳನ್ನು ಇಷ್ಟಪಡುತ್ತಿದ್ದನು. ಅವನಲ್ಲಿನ ಒಂದು ಸಂದೇಶವೂ ನೇರ ವಾಗಿ ಅವನನ್ನು ಪರಿವರ್ತಿಸಿತು ಎಂದು ತಿಳಿಸುತ್ತಿದ್ದನು. "ಅವನಲ್ಲಿ ನಾನು ಯಾವುದೇ ಪರಿವರ್ತನೆಯನ್ನು ಕಾಣದಿರುವಾಗ, ಹೇಗೆ ಅವನು ಸಂದೇಶವನ್ನು ಇಷ್ಟಪಡುತ್ತಿದ್ದನು? ಎಂಬ ಆಲೋಚನೆಯ ನನಗೆ ಉಂಟಾಗುತ್ತಿತ್ತು." ಒಂದು ದಿವಸ ಅದನ್ನು ನಾನು ತಿಳಿದುಕೊಂಡೆ; ಅಂಥ ಸಂದೇಶಕ್ಕೆ ದೀನತೆಯಿಂದ ಬಗ್ಗಿ ಸ್ವೀಕರಿಸಿದರೆ, ಅವನಿಗೆ ಒಳ್ಳೆ ಯದಾಗುತ್ತಿತ್ತು ಎಂಬುದು ಅವನ ಆಲೋಚನೆಯಾಗಿತ್ತು. ಆದುದರಿಂದ ಯಾಕೋಬನು ಸರಿಯಾದ ವಾಕ್ಯವನ್ನು ತಿಳಿಸಿದ್ದಾನೆ, "ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ" (ಯಾಕೋಬ 1:22).

ವಾಕ್ಯಕ್ಕೆ ವಿಧೇಯರಾಗಬೇಕು ಎಂಬ ಅಗತ್ಯವನ್ನು ತಿಳಿದುಕೊಂಡ ನಂತರ, ಯಾಕೋ ಬನು ಮೂರು ಅಂಶಗಳನ್ನು ಸ್ಪಷ್ಟೀಕರಿಸುತ್ತಾನೆ. ವಚನ 23 ಮತ್ತು 24ರಲ್ಲಿ ವಾಕ್ಯವನ್ನು ಕೇಳಿ ಯು ಮರೆತು ಬಿಡುವಂಥ ವ್ಯಕ್ತಿಯ ಸ್ವಭಾವ ಕುರಿತಾದ ವಿಷಯವು ಮೊದಲನೆಯದಾಗಿದೆ. ಒಬ್ಬನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿಕೊಂಡ, "ತಕ್ಷಣವೇ" ತಾನು ಹೀಗಿದ್ದೇ ನೆಂದು ಮರೆಯುವಂಥವನ ಬಗ್ಗೆ ಊಹೆಮಾಡಿಕೊಳ್ಳಿರಿ? ವಾಕ್ಯವನ್ನು ಕೇಳಿ, ತಕ್ಷಣ ಅದನ್ನು ಮರೆಯುವವನ ಕುರಿತಾಗಿ ಯಾಕೋಬನು ತಿಳಿಸುತ್ತಿದ್ದಾನೆ. ಕಪಟಿಗಳು ಕೇಳುತ್ತಾರೆ. ಹೌದು ಎಂದು ತಲೆಯಾಡಿಸುತ್ತಾರೆ, ಮತ್ತು ಆ ಸತ್ಯದೊಂದಿಗೆ ಒಪ್ಪಂದವನ್ನು ಸಹ ಮಾಡಿಕೊಳ್ಳು ತ್ತಾರೆ, ನಂತರ ಹೊರಟು ತಮ್ಮ ಇಚ್ಚಾಮೇರೆಗೆ ಜೀವಿಸುತ್ತಾರೆ. ಈ ಮೂಲಕ ಅವರು ಕೇಳಿದ ಸತ್ಯವನ್ನು ಹಾಳು ಮಾಡುವವರಾಗಿದ್ದಾರೆ. ವಚನ 25ರಲ್ಲಿ ಎರಡನೆಯದನ್ನು ಗಮನಿಸೋಣ. ವಾಕ್ಯಕ್ಕೆ ವಿಧೇಯರಾಗಿರುವವರು ಧನ್ಯರು ಎಂಬ ವಾಗ್ದಾನವನ್ನು ಹೊಂದಿರುವರು. 21ನೇ ವಚನದಲ್ಲಿ ತಿಳಿಸಿರುವ ರಕ್ಷಣೆಯೆಂಬ ಆಶೀರ್ವಾದವಾಗಿರುತ್ತಾನೆ. ಕೇಳುವ ಮತ್ತು ನೆರವೇರಿಸುವ - ಎರಡು ಸವಾಲುಗಳಿವೆ. ಮೊದಲನೆಯದಾಗಿ ವಚನ 26ರಲ್ಲಿ ಯಾಕೋಬನು, "ಯಾವನಾದರು ತನ್ನ ನಾಲಿಗೆಗೆ ಕಡಿವಾಣವನ್ನು ಹಾಕುವದಿಲ್ಲವೆ?"

ಅದು ಅವರಿಗೆ ತೊಂದರೆ ಉಂಟುಮಾಡಿದ ಹಾಗೆ ನಮಗೂ ಉಂಟುಮಾಡುತ್ತದೆ; ಆದುದರಿಂದ, ನಂಬಿಕೆಯು ನಾಲಿಗೆಯ ಕುರಿತಾಗಿ ಏನನ್ನಾದರು ಮಾಡಬೇಕೆಂದು ಪುನಃ ಪುನಃ ಒತ್ತಿ ಹೇಳಿದ್ದಾನೆ. ಎರಡನೆಯದಾಗಿ, ವಚನ 26ರಲ್ಲಿ ಸಂಕಷ್ಟದಲ್ಲಿ ಬಿದ್ದ ದಿಕ್ಕಿಲ್ಲದರನ್ನು ಪರಾಮರಿಸಬೇಕು. ನಮ್ಮ ಅನ್ಯೋನ್ಯತೆಗಳಲ್ಲಿ "ಹೇಗೆ" ಮತ್ತು "ಯಾಕೆ" ಕೊರತೆಯಲ್ಲಿರುವವರನ್ನು ಪರಾಂಬರಿಸಬೇಕು ಎಂಬ ವಾಗ್ವಾದಗಳು ಉಂಟಾಗುತ್ತದೆ! ಕೊರತೆಯಲ್ಲಿರುವವರನ್ನು ಅಲಕ್ಷ್ಯ ಮಾಡಿದರೆ ನಾವು ಹೀನವಾದ ಕಪಟಿಗಳಾಗುತ್ತೇವೆ, ಯಾಕಂದರೆ ನಮ್ಮ ದೇವರು ಅವರ ಬಗ್ಗೆ ಯಾವಾಗಲೂ ಚಿಂತಿಸುವವನಾಗಿದ್ದಾನೆ. ಕೊರತೆಗಳನ್ನು ನೀಗಿಸುವರಲ್ಲಿ ಯೇಸುವಿನ ಮಾದರಿಯನ್ನು ನಾವು ಅನುಸರಿಸಬೇಕು. ಯೇಸು ಅವರನ್ನು ಪ್ರೀತಿಸಿ ಅವರ ಕೊರತೆಗಳನ್ನು ನೀಗಿಸಿದನು. ಆತನ ಈ ಪ್ರೀತಿಯ ಕ್ರಿಯೆಯು, ಅವನ ಸಂದೇಶವನ್ನ ಜನರು ಕೇಳುವಂತೆ ಪ್ರೇರಿಸಿತು, - ನಾವು ಅದೇ ರೀತಿ ಯಲ್ಲಿ ಮಾಡೋಣ.

## ಮುಕ್ತಾಯ

ನಮ್ಮ ಪೂರ್ವಿಕರಾದ ಇಸ್ರಾಯೇಲ್ಯರು ಅವರ ಸಂಪ್ರದಾಯ ಮತ್ತು ಪದ್ಧತಿಗಳ ಆಚರಣೆಯ ಮೂಲಕ ಹೀನವಾದ ಪಾಪಗಳನ್ನು ಮಾಡಿದರು. ಪ್ರಾಯೋಗಿಕವಾದದ್ದನ್ನು ಮತ್ತು ಬಾಹಿರ ಆಚರಣೆಗಳನ್ನು ಮಾಡಿದರು. ಈ ರೀತಿಯಾದ ಯೆಹೋವನ ಹೇಳಿಕೆಯನ್ನು ಮೀಕನು ನೀಡಿದನು.

ನಾನು ಯೆಹೋವನ ಸನ್ನಿಧಿಯಲ್ಲಿ ಯಾವ
 ಕಾಣಿಕೆಯೊಡನೆ ಕಾಣಿಸಿಕೊಳ್ಳಲಿ,
ಯಾವದನ್ನರ್ಪಿಸಿ ಮಹೋನ್ನತ ದೇವರ ಸಮ್ಮುಖ
 ದಲ್ಲಿ ಅಡ್ಡ ಬೀಳಲಿ?
ಹೋಮದ ಪಶುಗಳನ್ನೂ ಒಂದು ವರುಷದ ಕರು
 ಗಳನ್ನೂ ತೆಗೆದುಕೊಂಡು ಬಂದು
ಆತನ ಮುಂದೆ ಕಾಣಿಸಿಕೊಳ್ಳಲೋ?
 ಸಾವಿರಾರು ಟಗರುಗಳನ್ನೂ ಲಕ್ಷೋಪಲಕ್ಷ ತೈಲ
ಪ್ರವಾಹಗಳನ್ನೂ ನೋಡಿ
 ಯೆಹೋವನು ಮೆಚ್ಚಾನೇ?
ನನ್ನ ದ್ರೋಹದ ನಿಮಿತ್ತ ನನ್ನ ಚೊಚ್ಚಲಮಗ
 ನನ್ನು ಅರ್ಪಿಸಲೋ,
ನನ್ನ ಆತ್ಮದ ಪಾಪಕ್ಕಾಗಿ ನನ್ನ ಗರ್ಭದ ಫಲವನ್ನು
 ಸಲ್ಲಿಸಲೋ?
ಮನುಷ್ಯನೇ, ಒಳ್ಳೆಯದು ಇಂಥದೇ ಎಂದು
 ಯೆಹೋವನು ನಿನಗೆ ತೋರಿಸಿದ್ದಾನಷ್ಟೆ;
ನ್ಯಾಯವನ್ನು ಆಚರಿಸುವದು, ಕರುಣೆಯಲ್ಲಿ
 ಆಸಕ್ತನಾಗಿರುವದು, ನಿನ್ನ ದೇವರಿಗೆ
 ನಮ್ರವಾಗಿ ನಡೆದುಕೊಳ್ಳುವದು,
ಇಷ್ಟನ್ನೇ ಹೊರತು ಯೆಹೋವನು ನಿನ್ನಿಂದ
 ಇನ್ನೇನು ಅಪೇಕ್ಷಿಸುವನು? (ಮೀಕ 6:6-8).

ದೇವರ ಮನೋಭಾವವು ಬದಲಾಗುವದಿಲ್ಲ; ಕಪಟವನ್ನು ಇನ್ನೂ ದ್ವೇಷಿಸುತ್ತಾನೆ. ನಾವು ನಂಬಿಕೆಯಲ್ಲಿ ಜೀವಿಸಬೇಕೆಂದು ಬಯಸುತ್ತಾನೆ.